

## ವೈರಾಗ್ಯ ಭಾಗ್ಯ

ಚೀನಾದ ಸಂತ ಚುವಾಂಗ್ ತ್ಸು ಜೂ ನದೀ ತೀರದಲ್ಲಿ ಗಾಳ ದಿಂದ ಮೀನು ಹಿಡಿಯುವುದರಲ್ಲಿ ತಲ್ಲೀನನಾಗಿದ್ದ. ಆ ಪ್ರದೇಶದ ರಾಜನ ಕಡೆಯಿಂದ ಒಬ್ಬ ದೂತನು ಬಂದು ಸಂತನಿಗೆ ಹೇಳಿದ : "ಮಹಾಸ್ವಾಮಿ, ಸಾಮ್ರಾಟನ ಅಪ್ಪಣೆಯಾಗಿದೆ, ನೀವು ಆಸ್ಥಾನಕ್ಕೆ ಬರಬೇಕಂತೆ."

"ಯಾತಕ್ಕಾಗಿ?" ಸಂತ ಕೇಳಿದ.

"ತಮ್ಮಂತಹ ಶ್ರೇಷ್ಠ ವ್ಯಕ್ತಿಗಳು ಆಸ್ಥಾನದಲ್ಲಿದ್ದರೆ ಆಸ್ಥಾನಕ್ಕೂ ಭೂಷಣ. ತಮ್ಮನ್ನು ಕರೆದುಕೊಂಡು ಹೋಗಲು ನಾನು ಬಂದಿದ್ದೇನೆ."

ಸಂತನು ಹೇಳಿದ : "ರಾಜನ ಸಂಗ್ರಹಾಲಯದಲ್ಲಿ ಒಂದು ಆಮೆಯ ಚಿಪ್ಪು ಇರುವುದಂತೆ, ಅದು ಸಾಲಂಕೃತವಾಗಿರುವುದಂತೆ ನಿಜವೇ?"

"ಹೌದು."

"ಅದಕ್ಕೆ ಜೀವ ಇದ್ದಿದ್ದರೆ ಆ ಶೃಂಗಾರವನ್ನಾಗಲೀ ಸ್ಥಾನವನ್ನಾಗಲೀ ಬಯಸದೆ ತನ್ನ ಮೂಲನಿವಾಸಕ್ಕೆ ಹೋಗಲು ಚಡಪಡಿಸುತ್ತಿತ್ತಲ್ಲವೆ?"

"ಹೌದು."

"ನನಗೂ ಅದೇ ತವಕ. ನನ್ನ ಸ್ವಾಭಾವಿಕ ಸ್ಥಿತಿಯಲ್ಲಿ ನಾನು ಇರಬಯಸುತ್ತೇನೆ. ಇದೇ ನನಗೆ ಆನಂದ. ಪದವಿಗಾಗಿ ನನ್ನನ್ನು ನಾನು ಕಳೆದುಕೊಳ್ಳಲಾರೆ. ನಿನ್ನ ರಾಜನಿಗೆ ನಾನು ಬರುವುದಿಲ್ಲವೆಂದು ಹೇಳು. ನಿಮ್ಮ ರಾಜವೈಭವ ನನಗೆ ಬೇಡ." ◆